
ತಯಬಅಲಿ ಅ. ಹೊಂಬಳ



# ಚಾಣಾಕ್ಷ ಗುರು

ಡಂಬಳಪುರಿ ಎಂಬ ರಾಜ್ಯ ಆಳುತ್ತಿದ್ದ ಸುಮಿತವರ್ಮನಿಗೆ ಇಬ್ಬರು ಮುದ್ದಾದ ರಾಜಕುಮಾರರು. ಒಬ್ಬ ಸಾಳವರ್ಮ, ಮತ್ತೊಬ್ಬ ಸೂತ್ರವರ್ಮ. ಮುದ್ದಿನಿಂದ ಯಾವ ತೊಂದರೆಯೂ ಆಗದಂತೆ ಈ ಮಕ್ಕಳನ್ನು ಬೆಳೆಸಿದ. ರಾಜಕುಮಾರರು ದೊಡ್ಡವರಾದರೆ ಹೊರತು ವಿದ್ಯೆ, ಬುದ್ಧಿ, ಶಕ್ತಿಯನ್ನು ಬೆಳೆಸಿಕೊಳ್ಳಲಿಲ್ಲ. ರಾಜನಿಗೆ ದೊಡ್ಡ ಚಿಂತೆಯಾಯಿತು. ಮಕ್ಕಳನ್ನು ಅತಿ ಪ್ರೀತಿಯಿಂದ ಬೆಳೆಸಿದ ರಾಜ ವಯಸ್ಸಿಗೆ ತಕ್ಕಂತೆ ಜಾಣರನ್ನಾಗಿ ಮಾಡಲಾಗಲಿಲ್ಲ.

ಈ ವಿಷಯ ಮಂತ್ರಿಗಳೊಂದಿಗೆ ಚರ್ಚಿಸಿದ, ಬಳಿಕ “ಮಂತ್ರಿಗಳೇ ನನ್ನ ಮಕ್ಕಳನ್ನು ಸಕಲ ವಿದ್ಯಾಪಾರಂಗತರನ್ನಾಗಿ ಮಾಡುವಂತಹ ಗುರುವನ್ನು ಹುಡುಕಿರಿ. ಅವರನ್ನು